5C.R.P.67
Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 73/2022

**ದಿನಾಂಕ ಃ 27.08.2024 ರಂದು ಪ್ರಮಾಣ ವಚನ ಬೋಧಿಸಲಾಗಿದೆ.**

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ .ಎಂ ವಕೀರಿಲಂದ ಃ**

1) ನಾನು ಓದಿಲ್ಲ. ನನ್ನ ಮಗಳನ್ನು ಆರೋಪಿತರ ಮನೆಗೆ ಮದುವೆ ಮಾಡಿಸುವುದಕ್ಕೆ, ವಡ್ಡರಹಳ್ಳಿ ಗ್ರಾಮದ ಯಜಮಾನರು ಮತ್ತು ನಮ್ಮ ಗ್ರಾಮದ ಯಜಮಾನರು ಮಧ್ಯಸ್ತಿಕೆಯನ್ನು ವಹಿಸಿದ್ದರು. ಆರೋಪಿಯ ಕಡೆಯಿಂದ, ಆರೋಪಿಯ ವಡ್ಡರಹಳ್ಳಿ ಗ್ರಾಮದವರಾದ, ನರಸಿಂಹಯ್ಯ, ಆರೋಪಿಗಳು ಮತ್ತು ಇನ್ನೊಬ್ಬರು ಮದುವೆರ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರು. ನಮ್ಮ ಕಡೆಯಿಂದ, ಮದುವೆ ಜವಾಬ್ದಾರಿಯನ್ನು ಪ್ರಮುಖವಾಗಿ, ನಮ್ಮ ಊರಿನ ಯಜಮಾನರಾದ ನಂಜಯ್ಯ, ಕೆಂಪಯ್ಯ, ನನ್ನ ಹೆಂಡತಿ, ನನ್ನ ಮಕ್ಕಳು, ನನ್ನ ಅಣ್ಣ, ನನ್ನ ಅಕ್ಕ - ಭಾವ ಮತ್ತು ನನ್ನ ಮಾವ ಜವಾಬ್ದಾರಿಯನ್ನು ಮದುವೆಗೆ ತೆಗೆದುಕೊಂಡಿದ್ದೆವು. ನಮ್ಮ ಕುಟುಂಬದ ಸಂಪ್ರದಾಯದಲ್ಲಿ ಪ್ರೀತಿ ವಿಶ್ವಾಸದಿಂದ ಕೊಡುವುದು, ತೆಗೆದುಕೊಳ್ಳುವುದು ಇತ್ತು. 1 ನೇ ಆರೋಪಿಗೆ, ಉಡುಗೊರೆಯಾಗಿ ಉಂಗುರ, ಬಟ್ಟೆ , ಛತ್ರಿ ಮತ್ತು ಚಪ್ಪಲಿಯನ್ನು ಕೊಟ್ಟಿದ್ದೆವು. ನನ್ನ ಮಗಳಿಗೆ ಉಡುಗೊರೆಯಾಗಿ, ಆರೋಪಿಗಳು, ಕಾಲು ಚೈನು, ಕಾಲುಂಗುರ ಮತ್ತು ಕತ್ತಿಗೆ ಒಂದು ತಾಳಿಯನ್ನು ಕೊಟ್ಟಿದ್ದರು. ಹಣಕಾಸಿನ ವಿಚಾರದಲ್ಲಿ, ಆರೋಪಿತರ ಕುಟುಂಬ, ನಮ್ಮ ಕುಟುಂಬಕ್ಕಿಂತ ಸ್ವಲ್ಪ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಉಂಗುರ, ಚೈನು, ಬ್ರಾಸ್ಲೈಟ್, ಒಂದು ಲಕ್ಷ ನಗದು ಬೇಕು ಮತ್ತು ಛತ್ರದಲ್ಲಿ ಮದುವೆ ಮಾಡಿಕೊಡಬೇಕು ಅಂತ, ಆರೋಪಿಗಳು ಮತ್ತು ಅವರೊಂದಿಗೆ ಬಂದಿದ್ದವರೆಲ್ಲರೂ ಬೇಡಿಕೆಯನ್ನು ಇಟ್ಟಿದ್ದರು. ಅದಕ್ಕೆ ನಾವು ಮತ್ತು ನಮ್ಮ ಕಡೆಯವರು, ನಾವು, ಬರಿ ನಮ್ಮ ಹೆಣ್ಣು ಮಗಳನ್ನು ಮಾತ್ರ ಕೊಡುತ್ತೇವೆ, ನೀವೇ ಮದುವೆ ಮಾಡಿಕೊಳ್ಳಿ ಅಂತ ಹೇಳಿದ್ದೆವು, ಅದಕ್ಕೆ ಆರೋಪಿಗಳು ಮತ್ತು ಅವರ ಕಡೆಯವರು ಒಪ್ಪಲಿಲ್ಲ. ಆಗ ಮಧ್ಯಸ್ತಿಕೆದಾರರು ಒಂದು ತೀರ್ಮಾನವನ್ನು ಮಾಡಿ, ಮದುವೆ ಮಾಡಿಕೊಟ್ಟುಬಿಡಿ, ಕೈಗೆ ಒಂದು ಉಂಗುರವನ್ನು ಮಾಡಿಸಿಕೊಟ್ಟುಬಿಡಿ ಮತ್ತು ನಿಮ್ಮ ಪ್ರೀತಿ ವಿಶ್ವಾಸದಿಂದ ಬೇರೆ ಏನಾದರೂ ಕೊಡುವುದು

ಬಿಡುವುದು ನಿಮಗೆ ಬಿಟ್ಟಿದ್ದು ನಿಮಗೆ, ಅಂತ ನಮಗೆ ಮಧ್ಯಸ್ತಿಕೆದಾರರಾಗಿದ್ದ, ನಂಜಯ್ಯ ಹೇಳಿದ್ದರು.

**(ಮಧ್ಯಾಹ್ನದ ನ್ಯಾಯಾಲಯದ ಕಲಾಪದ ಅವಧಿ ಮುಗಿದಿದ್ದರಿಂದ, ಬಾಕಿ ಪಾಟೀ ಸವಾಲನ್ನು ಮುಂದೂಡಲಾಯಿತು).**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.